ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅಭಿಪ್ರಾಯದ ಮಾತು.

Sandalkote Building at Chikmagalur (suitability to locate Intermediate College).

Q.—106. **Srimathi B. L. SUBBAMMA** (Chikmagalur-Mudigere).—

Will the Government be pleased to state:—

(*a*) whether an order has been issued recently that the Sandalkote Building be given away to the Intermediate College at Chikmagalur due to want of sufficient accommodation in the present building in which the said college is now located;

(*b*) whether the public have not deposited one lakh of rupees for shifting the Sandalkote to some other place;

(*c*) whether they would take steps for the proper maintenance of the college?

A.—**Sri A. G. RAMACHANDRA RAO** (Minister for Law and Education).—

(*a*) Yes. In November 1952.
(*b*) Yes.
(*c*) Yes.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಇಂಟರ್ ಮೀಡಿಯಟ್ ಕಾಲೇಜಿಗೆ ಸರಿಯಾದ ಕಟ್ಟಡವಿಲ್ಲದೆ ಇರುವುದರಿಂದ, ಚಿಕ್ಕಮಗಳೂರಿನಲ್ಲಿ ಪಬ್ಲಿಕ್ ಲೈಬ್ರೆರಿ, ಟೌನ್‌ಹಾಲ್ ಮತ್ತು ಮುನಿಸಿಪಾಲಿಟಿಗಳಿಗೆ ಸ್ಥಳಕ್ಕೆ ಅನಾನುಕೂಲವಾಗಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇದಕ್ಕೆ ಅನುಕೂಲ ಪಡಿಸಲು ಸರ್ಕಾರದವರು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಾಲೇಜಿಗೆ ಅನುಕೂಲ ಪಡಿಸುವುದಕ್ಕಾಗಿ, ಸ್ಯಾಂಡಲ್ ಕೋಟಿ ಮತ್ತು ಫಾರೆಸ್ಟ್ ನರ್ಸರಿಯನ್ನು ಬೇರೆಕಡೆಗೆ ಹಾಕಿಬಿಡಿ ಎಂದು ತೀರ್ಮಾನ ಮಾಡಿದ್ದೇವೆ, ಮತ್ತು ಇರತಕ್ಕಂಥ ಹಣವನ್ನು ವಿಂಗಡನೆಮಾಡಿ ಜಾಗ್ರತೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ತೀರ್ಮಾನ ಮಾಡಿ ಎರಡು ವರ್ಷಗಳಾದರೂ ಕೂಡ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ. ಯೂನಿವರ್ಸಿಟಿಗೂ ಕೂಡಾ ತಿಳಿಸಿದ್ದೇವೆ.

ಶ್ರೀ ಟಿ. ಸಿ. ಬನಪ್ಪ.—ಉತ್ತರದಲ್ಲಿ ಒತ್ತಾಯ ಪಡಿಸುತ್ತಿದ್ದೇವೆ ಎಂದು ಹೇಳಿದಿರಿ. ಯಾರನ್ನು ಸ್ವಾಮಿ ತಾವು ಒತ್ತಾಯ ಪಡಿಸುತ್ತಾ ಇರುವುದು?

Sri A. G. RAMACHANDRA RAO.—Both the University and the Forest Department.

ಶ್ರೀ ಟಿ. ಸಿ. ಬನಪ್ಪ.—ಹಣ ಡಿಪಾಸಿಟ್ ಮಾಡಿ ಎರಡು ವರ್ಷಗಳಾದರೂ ಇನ್ನೂ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಯಾವ ಇಲಾಖೆಯವರು ಕಾರಣ ಎಂಬುದನ್ನು ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಾ departmentಗಳೂ ಕಾರಣ ಎಂದುಹೇಳಿ ಬಹುದು.

ಶ್ರೀ ಟಿ. ಸಿ. ಬನಪ್ಪ.—ಸರ್ಕಾರದವರು ಈ ವರ್ಷವಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದಿಂದ ತಡವಾಗುತ್ತಾ ಇಲ್ಲ. ಸರ್ಕಾರದವರು order ಮಾಡಿ ಆಗಿದೆ. ಅದನ್ನು ಜಾಗ್ರತೆ ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಜಿಲ್ಲಾ ಬೋರ್ಡಿನವರು ನರ್ಸರಿ ಜಾಗಕ್ಕೆ 3 ಸಾವಿರ ರೂಪಾಯಿಗಳ ಮೇಲ್ಪಟ್ಟು ಕೊಡಬೇಕೆಂದು ಹೇಳಿರುವುದು ನಿಜವೇ?

Sri A. G. RAMACHANDRA RAO.—I want notice.

ಶ್ರೀ ಜಿ. ಪುಟ್ಟಸ್ವಾಮಿ.—Compensation ಕೇಳಿರುವುದು ಜಾಸ್ತಿ, ಅದನ್ನು ಕಡಮೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ಮಾಡಿರುವುದು ನಿಜವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲನೇ ಪ್ರಶ್ನೆ ಗೊತ್ತಿಲ್ಲ. ಆದ್ದರಿಂದ ಎರಡನೇ ಪ್ರಶ್ನೆಗೆ ಉತ್ತರ ಹೇಗೆ ಹೇಳುವುದು?

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರದಲ್ಲಿ ಈ ಸಂಬಂಧಪಟ್ಟ ರಿಕಾರ್ಡು ಬಾಕಿ ಇದೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—Intermediate College ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಕಟ್ಟಡಗಳಲ್ಲಿ ನಡೆಯುತ್ತಿದೆ?

ಶ್ರೀ ಎ. ಜಿ ರಾಮಚಂದ್ರರಾವ್.—ಮಾನ್ಯ ಸದಸ್ಯರಿಗೇ ಅದು ಚೆನ್ನಾಗಿ ಗೊತ್ತಿದೆ.

12-30 P.M.

Intermediate College in Malleswaram

Q.—475. **Sri V. R. NAIDU** (Malleswaram).—

Will the Government be pleased to state:—

(*a*) whether the establishment of an Intermediate College in the northern extension of the City, *viz.*, Malleswaram for the benefit of the boy and